ಮಡಿಕೇರಿಯಲ್ಲಿ ಸುವರ್ಣ ಸಾಂಸ್ಕೃತಿಕ ಸಮುಚ್ಚಯ ಕಟ್ಟಡದ ಕೆಲಸ ಪ್ರಾರಂಭಿಸಲು ಟೆಂಡರ್ ಕರೆಯುವ ಪ್ರಕ್ರಿಯೆ ನಡೆದಿದೆ

ಆ) ಉಡುಪಿ ಜಿಲ್ಲೆಯಲ್ಲಿ ಸುವರ್ಣ ಸಾಂಸ್ಕೃತಿಕ ಸಮುಚ್ಚಯ ನಿರ್ಮಿಸಲು ರೂ 50 00 ಲಕ್ಷ ಬಿಡುಗಡೆ ಮಾಡಲಾಗಿದೆ ಮಡಿಕೇರಿಯಲ್ಲಿ ನಿರ್ಮಾಣವಾಗುತ್ತಿರುವ ಸುವರ್ಣ ಸಾಂಸ್ಕೃತಿಕ ಸಮುಚ್ಚಯಕ್ಕೆ ರೂ 107 00 ಲಕ್ಷ ಬಿಡುಗಡೆಯಾಗಿದೆ

831 (1166) ಶ್ರೀ ಆಂಜನೇಯ ಹೆಚ್ (ಭರಮಸಾಗರ) ಮಾನ್ಯ ಗೃಹ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪೊಲೀಸ್ ಇಲಾಖೆಯಲ್ಲಿ ದಳಪತಿಗಳ ನೇಮಕವನ್ನು ಯಾವ ಆಧಾರದ ಮೇಲೆ ಮಾಡಲಾಗಿದೆ

ಆ) ಹಾಗಿದ್ದಲ್ಲಿ, ಇವರಿಗೆ ವೇತನ ನೀಡದಿರುವ ಕಾರಣವೇನು ?

ಇ) ಸರ್ಕಾರದ ವತಿಯಿಂದ ಕನಿಷ್ಟ ವೇತನ ಏನಾದರೂ ನೀಡಲು ಕ್ರಮ ತೆಗೆದುಕೊಳ್ಳಲಾಗಿದೆಯೇ ?

ಶ್ರೀ ಎಂ ಪಿ ಪ್ರಕಾಶ್ (ಗೃಹ ಕಾನೂನು ಮತ್ತು ನ್ಯಾಯ ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) –

ಅ) ಪೊಲೀಸ್ ಇಲಾಖೆಯಲ್ಲಿ ದಳಪತಿಗಳ ನೇಮಕವನ್ನು ಗ್ರಾಮ ರಕ್ಷಣಾ ದಳಗಳ ಅಧಿನಿಯಮ 1964ರ ಪ್ರಕರಣ ಕ್ರಮವಾಗಿ 8 ಮತ್ತು 9ರಡಿಯಲ್ಲಿ ನೇಮಕ ಮಾಡಿಕೊಳ್ಳಲಾಗುತ್ತಿತ್ತು

ಆ) ಗ್ರಾಮ ರಕ್ಷಣಾ ದಳಗಳ ನಿಯಮ 1965ರ ನಿಯಮ 16(ಐ) ಪ್ರಕಾರ ದಳಪತಿಗಳು ಕೆಲಸ ನಿರ್ವಹಿಸಿದ ಬಗ್ಗೆ ಕಾಲಕಾಲಕ್ಕೆ ವರದಿಗಳನ್ನು, ರಿಜಿಸ್ಟರ್ ಇತ್ಯಾದಿಗಳನ್ನು ನಿರ್ವಹಣೆ ಮಾಡಬೇಕಾಗಿರುತ್ತದೆ ಹಾಗೂ ಆ ದಾಖಲಾತಿಗಳನ್ನು ಸಂಬಂಧಿಸಿದ ಅಧಿಕಾರಿಗಳಿಂದ ಪ್ರಮಾಣೀಕರಿಸ ಬೇಕಾಗಿರುತ್ತದೆ ಆದರೆ, ಈ ರೀತಿಯಾಗಿ ಯಾವುದೇ ದಳಪತಿಗಳು ಮೇಲಿನ ನಿಯಮದನ್ವಯ ಕೆಲಸ ನಿರ್ವಹಿಸಿಲ್ಲವಾದ್ದರಿಂದ ಅವರು ಗೌರವಧನ ಪಡೆಯಲು ಅರ್ಹರಿರುವುದಿಲ್ಲ

ಅಲ್ಲದೇ, ಸರ್ಕಾರದ ಅಧಿಸೂಚನೆ ಸಂಖ್ಯೆ ಸಂವ್ಯಾಶಾಇ/38/ಶಾಸನ /2003, ಬೆಂಗಳೂರು ದಿನಾಂಕ 08–03–04ರಂದು ಕರ್ನಾಟಕ ಗ್ರಾಮ ರಕ್ಷಣಾ ದಳಗಳ ಅಧಿನಿಯಮ 1964ನ್ನು ಹಿಂತೆಗೆದುಕೊಂಡಿರುತ್ತದೆ

ಇ) ಉದ್ಭವಿಸುವುದಿಲ್ಲ

832 (1167) ಶ್ರೀ ಆಂಜನೇಯ (ಭರಮಸಾಗರ) ಮಾನ್ಯ ಗೃಹ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಪೊಲೀಸ್ ಉಪಾಧೀಕ್ಷಕರ (ಡಿವೈಎಸ್‌ಪಿ ಹುದ್ದೆಗಳ ಸಂಖ್ಯೆ ಎಷ್ಟು ಹಾಗೂ ಇವುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಸಂಖ್ಯೆ ಎಷ್ಟು)

ಆ) ಇನ್ಸ್‌ಪೆಕ್ಟರ್ ಹುದ್ದೆಯಲ್ಲಿ ಉಪಾಧೀಕ್ಷಕರ ಹುದ್ದೆಗೆ ಎಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಬಡ್ತಿ ನೀಡಲಾಗಿದೆ

ಇ) ಪ್ರಸ್ತುತ ಬಡ್ತಿಯ ಜೇಷ್ಠತಾ ಪಟ್ಟಿಯಲ್ಲಿ ವ್ಯತ್ಯಾಸ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಹಾಗಿದ್ದಲ್ಲಿ, ತೆಗೆದುಕೊಂಡ ಕ್ರಮಗಳೇನು (ಸಂಪೂರ್ಣ ವಿವರ ನೀಡುವುದು)

ಉ) ಇವರುಗಳಿಗೆ ಬಡ್ತಿ ನೀಡುವಾಗ ರೋಸ್ಟರ್ ಪದ್ಧತಿ ಅನುಸರಿಸಿ ಬಡ್ತಿ ನೀಡಲಾಗಿದೆಯೇ ?

ಶ್ರೀ ಎಂ ಪಿ ಪ್ರಕಾಶ್ (ಗೃಹ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) –

ಅ) ಡಿವೈಎಸ್‌ಪಿ (ಸಿವಿಲ್) ಹುದ್ದೆಗಳ

ಮಂಜೂರಾತಿ ಬಲ	–	283
ಪರಿಶಿಷ್ಟ ಜಾತಿ	–	44
ಪರಿಶಿಷ್ಟ ಪಂಗಡ	–	14

ಆ) ಪಿ ಐ ಹುದ್ದೆಯಂದಿ ಸ್ವತಂತ್ರ ಪ್ರಭಾರ ಡಿವೈಎಸ್‌ಪಿ (ಸಿವಿಲ್) ಹುದ್ದೆಗೆ ನೀಡಿರುವ ಸಂಖ್ಯೆ

1	ಪರಿಶಿಷ್ಟ ಜಾತಿ	–	50
2	ಪರಿಶಿಷ್ಟ ಪಂಗಡ	–	09